

## ಬೆಂಕಿ ಹಚ್ಚಿದ್ದು ಏಕೆ?

ವಿಜಯದಶಮಿಯ ದಿನ, ರಾಮಲೀಲಾ ಮೈದಾನದಲ್ಲಿ ರಾವಣನ ಪ್ರತಿಮೆಗೆ ಬೆಂಕಿ ಹಚ್ಚಿ, ಅದರ ಉರಿಯನ್ನು ನೋಡುತ್ತ ಜನರು ನಿಂತಿದ್ದರು. ಅದೇ ಹೊತ್ತು ರಾವಣ ಪ್ರತ್ಯಕ್ಷನಾಗಿ ಜನರನ್ನು ಕೇಳಿದ: 'ನೀವೆಲ್ಲ ಸೇರಿ, ನನಗೆ ಯಾಕೆ ಬೆಂಕಿ ಹಚ್ಚಿದ್ದೀರಿ? ನಾನೇನು, ನಿಮ್ಮ ಮಡದಿಯನ್ನು ಎತ್ತಿಕೊಂಡು ಹೋಗಿದೀನಾ!?'

ಆಗ, ಒಬ್ಬ ಸಿಟ್ಟಿನಿಂದ ಕಿರುಚಿದ, 'ನಮ್ಮ ಹೆಂಡತಿಯನ್ನ ಎತ್ತಿಕೊಂಡು ಹೋಗಿಲ್ಲ ಅಂತಾನೇ ನಾವು ನಿನಗೆ ಬೆಂಕಿ ಹಚ್ಚಿದ್ದು!' ರಾವಣ ಅಲ್ಲಿಂದ ಪರಾರಿಯಾದ.

**ಪ್ರತಿಮಾ ಪ್ರಮೋದ ಮೋನೆ**

## ಅವರು ಗಂಡಸರಲ್ಲ...

ಸರೋಜಕ್ಕ ಮಧ್ಯಾಹ್ನ ಮನೆಕೆಲಸ, ಊಟ ಮುಗಿಸಿ ಮಧ್ಯಾಹ್ನ ಮಲಗಿದರೆ ಮೈ ಬರುತ್ತದೆಂದು ಯಾರೋ ಹೇಳಿದನ್ನು ನೆನೆದು ಪಕ್ಕದ ಮನೆ ಶಾಂತಕ್ಕನನ್ನು ಮಾತಾಡಿಸಿಕೊಂಡು ಬರುವ ಅಂತ ಹೋದರು. ಅಲ್ಲಿ ಶಾಂತಕ್ಕ ನಾಲ್ಕಾರು ಮಹಿಳೆಯರೊಡನೆ ಹರಟೆಯಲ್ಲಿ ತಲ್ಲೀನರಾಗಿದ್ದರು. ಶಾಂತಕ್ಕನ ಗಂಡ ಹುಷಾರಿಲ್ಲದ ಕಾರಣ ರಜೆ ಹಾಕಿ ಒಳಗಿನ ಕೋಣೆಯಲ್ಲಿ ಮಲಗಿದ್ದರು. ಇದು ಸರೋಜಕ್ಕನಿಗೆ ಗೊತ್ತಿರಲಿಲ್ಲ. ಮಲಗಿದ್ದ ಶಾಂತಕ್ಕನ ಗಂಡ ಕೆಮ್ಮಿದಾಗ ಆಕೆಗೆ ಆಶ್ಚರ್ಯವಾಯ್ತು. 'ಗಂಡಸರು ಯಾರೋ ಇರೋ ಹಾಗಿದೆ!? ಎಂದು ಸರೋಜಕ್ಕ ಸಂಕೋಚಪಟ್ಟಾಗ... ತಕ್ಷಣ ಶಾಂತಕ್ಕ 'ಅಯ್ಯೋ... ಯಾಕೆ ಸಂಕೋಚ ಪಡುತ್ತೀರಿ ಸರೋಜಕ್ಕ, ಅವರು ಗಂಡಸರಲ್ರೀ... ನನ್ನ ಗಂಡ' ಎಂದಾಗ ಕೋಣೆಯೊಳಗಿದ್ದ ಆ ಬಡಪಾಯಿ ಗಂಡನ ಮುಖ ಇಂಗು ತಿಂದ ಮಂಗನಂತಾಗಿತ್ತು!

**ಯು.ಎಸ್. ಶ್ರೀನಿವಾಸರಾವ್, ಬೆಂಗಳೂರು**



ಚಿತ್ರಗಳು: ಗಣೇಶ ಆಚಾರ್ಯ